# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1390 |
| ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 22-08-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೃಷಿಗೆ ಬಳಕೆಯಾಗುವ ಸಹಾಯಧನದ (highly subsidized) ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ, ಕಾರ್ಖಾನೆ/ ಕೈಗಾರಿಕೆಗಳಿಗೆ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ, ಕಾರ್ಖಾನೆ/ ಕೈಗಾರಿಕೆಗಳಿಗೆ ಬಳಸುತ್ತಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ. |
| (ಆ) | ಕಳೆದ ಮೂರು ವರ್ಷಗಳಲ್ಲಿ ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಅಕ್ರಮವಾಗಿ ಸಾಗಿಸುತ್ತಿದ್ದಕ್ಕೆ ಸಂಬಂಧಿಸಿದಂತೆ ದಾಖಲಿಸಲ್ಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು; ಈ ಪ್ರಕರಣಗಳು ಯಾವ ಜಿಲ್ಲೆಗಳಲ್ಲಿ ವರದಿಯಾಗಿವೆ; (ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಯೂರಿಯಾ ರಸಗೊಬ್ಬರವನ್ನು ಅಕ್ರಮವಾಗಿ ಸಾಗಿಸುತ್ತಿರುವವರ ವಿರುದ್ಧ ಒಟ್ಟು 21 ಮತ್ತು ಪ್ರಸಕ್ತ ಸಾಲಿನಲ್ಲಿ 06 ಪ್ರಕರಣಗಳು ವರದಿಯಾಗಿದ್ದು, ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಆ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ಎಫ್.ಐ.ಆರ್ ಗಳನ್ನು ದಾಖಲಿಸಲಾಗಿರುತ್ತದೆ. ವಿವರವನ್ನು ಅನುಬಂಧ 1ರಲ್ಲಿ ಒದಗಿಸಲಾಗಿದೆ. |
| (ಇ) | ಈ ಪ್ರಕರಣಗಳಲ್ಲಿ ಎಷ್ಟು ಪ್ರಮಾಣದ ರಸಗೊಬ್ಬರವನ್ನು ವಶಪಡಿಸಿಕೊಳ್ಳಲಾಗಿದೆ; ಇದರ ಒಟ್ಟು ಮೌಲ್ಯ ಎಷ್ಟು; | ಕಳೆದ ಮೂರು ವರ್ಷಗಳಲ್ಲಿ ಯೂರಿಯಾ ರಸಗೊಬ್ಬರವನ್ನು ಅಕ್ರಮವಾಗಿ ಸಾಗಿಸುತ್ತಿರುವ ಒಟ್ಟು 21 ಪ್ರಕರಣಗಳಲ್ಲಿ ರೂ.27,34,834 ಮೌಲ್ಯದ, 462.66 ಮೆ.ಟನ್ ಯೂರಿಯಾ ರಸಗೊಬ್ಬರವನ್ನು ಜಪ್ತು ಮಾಡಲಾಗಿರುತ್ತದೆ.<br><br>ಪ್ರಸಕ್ತ ಸಾಲಿನಲ್ಲಿ 06 ಪ್ರಕರಣಗಳು ವರದಿಯಾಗಿದ್ದು, ರೂ. 5,46,955 ಮೌಲ್ಯದ, 92.53 ಮೆ.ಟನ್ ಯೂರಿಯಾ ರಸಗೊಬ್ಬರವನ್ನು ಜಪ್ತು ಮಾಡಲಾಗಿರುತ್ತದೆ. |

| | | |
|---|---|---|
| (ಈ) | ಸಹಾಯಧನದ ಯೂರಿಯಾ ರಸಗೊಬ್ಬರ ಕೃಷಿಯೇತರ ಚಟುವಟಿಕೆಗಳಿಗೆ ಬಳಕೆಯಾಗದಂತೆ ತಡೆಯಲು ಕೈಗೊಂಡಿರುವ ಕ್ರಮಗಳೇನು; | ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆಯಾಗದಂತೆ ತಡೆಯಲು ಮತ್ತು ರಸಗೊಬ್ಬರ (ನಿಯಂತ್ರಣ) ಆದೇಶ, 1985ರ ಉಲ್ಲಂಘನೆ ಸಂಬಂಧ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ರಸಗೊಬ್ಬರ ಪರಿವೀಕ್ಷಕರನ್ನು ಅಧಿಸೂಚಿಸಲಾಗಿರುತ್ತದೆ ಹಾಗೂ ಅಪರ ಕೃಷಿ ನಿರ್ದೇಶಕರು(ಜಾಗೃತ ಕೋಶ) ರವರ ನೇತೃತ್ವದಲ್ಲಿ ಜಾಗೃತ ಕೋಶ ಸೃಜಿಸಲಾಗಿದ್ದು, ಇವರ ಅಧೀನದಲ್ಲಿ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ (ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ) ಜಂಟಿ ಕೃಷಿ ನಿರ್ದೇಶಕರು (ಜಾಗೃತ ಕೋಶ) ಕಾರ್ಯನಿರ್ವಹಿಸುತ್ತಿದ್ದಾರೆ. ಜಾಗೃತಕೋಶದ ಅಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು(ಜಾರಿದಳ) ಮತ್ತು ಅಧಿಸೂಚಿಸಿರುವ ರಸಗೊಬ್ಬರ ಪರಿವೀಕ್ಷಕರು ದೂರುಗಳನ್ನು ಆಧರಿಸಿ/ಅನಿರೀಕ್ಷಿತವಾಗಿ/ಆಗಿಂದ್ದಾಗ್ಗೆ ಅವರ ವ್ಯಾಪ್ತಿಯಲ್ಲಿನ ಯೂರಿಯಾ ಬಳಸುತ್ತಿರುವ ಕೈಗಾರಿಕೆಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆಯನ್ನು ಕೈಗೊಂಡು ತಾಂತ್ರಿಕ ದರ್ಜೆಯ(Technical Grade) ಯೂರಿಯಾ ರಸಗೊಬ್ಬರದ ಚೀಲಗಳಲ್ಲಿ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ಸದರಿ ಮಾದರಿಯ ವಿಶ್ಲೇಷಣಾ ವರದಿಯಲ್ಲಿ ಬೇವಿನ ಅಂಶ ವರದಿಯಾದಲ್ಲಿ, ರಸಗೊಬ್ಬರ (ನಿಯಂತ್ರಣ) ಆದೇಶ, 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ, 1955ರಡಿ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ<br><br>ಇತರೆ ರಾಜ್ಯದ ಗಡಿ ಹೊಂದಿರುವ ಜಿಲ್ಲೆಗಳ ಚೆಕ್ ಪೋಸ್ಟ್ ಗಳಲ್ಲಿ ಅನಧಿಕೃತವಾಗಿ/ಅಕ್ರಮವಾಗಿ ಯೂರಿಯಾ ಹಾಗೂ ಇನ್ನಿತರೆ ರಸಗೊಬ್ಬರಗಳ ಸಾಗಾಣಿಕೆಯ ಬಗ್ಗೆ ಕೃಷಿ ಇಲಾಖೆ ಮತ್ತು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಸಂಬಂಧಪಟ್ಟ ಇಲಾಖೆಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ನಿರ್ದೇಶನ ನೀಡಿ ಕಟ್ಟುನಿಟ್ಟಿನ ಕ್ರಮವಹಿಸಲಾಗುತ್ತಿದೆ.<br><br>ಕೃಷಿಗೆ ಬಳಸುತ್ತಿರುವ ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ |

| | | |
|---|---|---|
| | | ಬಳಕೆಯಾಗುವುದನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ಕಷಿ ಇಲಾಖೆ, ಪೊಲೀಸ್ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಇತರ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ತಂಡಗಳನ್ನು ರಚಿಸಿ ಜಿಲ್ಲಾಧಿಕಾರಿಗಳಿಂದ ಆದೇಶ ಹೊರಡಿಸಲಾಗಿದೆ. ಸದರಿ ತಂಡಗಳು ಯೂರಿಯಾ ಬಳಸುತ್ತಿರುವ ಕೈಗಾರಿಕೆಗಳನ್ನು ಪರಿಶೀಲಿಸುತ್ತಿದ್ದು, ಕೃಷಿಗೆ ಬಳಸುವ ಸಹಾಯಧನದ ಯೂರಿಯಾ ಬಳಸುತ್ತಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸಲಾಗುತ್ತಿದೆ. |
| (ಉ) | ಗೊಬ್ಬರದ ಜೊತೆಗೆ ಲಿಂಕ್ ಮಾಡಲಾದ ಗೊಬ್ಬರ ಮತ್ತು ದ್ರಾವಣ ಖರೀದಿಸುವುದು ಕಡ್ಡಾಯವೇ; ಈ ರೀತಿ ಒತ್ತಡ ಹಾಕಲು ಮಾರಾಟಗಾರರ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಜರುಗಿಸಲಿದೆ; | ರಸಗೊಬ್ಬರ ಮಾರಾಟಗಾರರು ರಿಯಾಯಿತಿ ದರದ ರಸಗೊಬ್ಬರದ ಜೊತೆಗೆ ಇತರೆ ಯಾವುದೇ ರಸಗೊಬ್ಬರಗಳು/ಕೃಷಿ ಪರಿಕರಗಳನ್ನು ಲಿಂಕ್ ಮಾಡಿ ರೈತರಿಗೆ ಮಾರಾಟ ಮಾಡುವಂತಿಲ್ಲ. ಈ ಸಂಬಂಧ ಪ್ರಕರಣಗಳು ಕಂಡುಬಂದಲ್ಲಿ ಸದರಿ ಮಾರಾಟಗಾರರ ವಿರುದ್ಧ ರಸಗೊಬ್ಬರ (ನಿಯಂತ್ರಣ) ಆದೇಶ, 1985ರನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಊ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜ, ರಸಗೊಬ್ಬರ ಮಾರಾಟ ಸಂಬಂಧ ಸ್ವೀಕೃತವಾದ ದೂರುಗಳ ಸಂಖ್ಯೆ ಎಷ್ಟು; ದಾಳಿ ನಡೆಸಲಾದ ಸಂಖ್ಯೆ, ವಶಕ್ಕೆ ಪಡೆಯಲಾದ ಕಳಪೆ ಬಿತ್ತನೆ ಬೀಜ, ರಸಗೊಬ್ಬರದ ಪ್ರಮಾಣ ಹಾಗೂ ದಾಖಲಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು; ತಪ್ಪಿತಸ್ಥರ ವಿರುದ್ಧ ಕೈಗೊಳ್ಳಲಾದ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜ ಸಂಬಂಧಿಸಿದಂತೆ 116 ದೂರುಗಳು ಹಾಗೂ ಕಳಪೆ ರಸಗೊಬ್ಬರ ಮಾರಾಟ ಸಂಬಂಧಿಸಿದಂತೆ 73 ದೂರುಗಳು ಸ್ವೀಕೃತವಾಗಿರುತ್ತವೆ.<br><br>ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜ ಸಂಬಂಧ 16 ಪ್ರಕರಣಗಳಲ್ಲಿ 105.41 ಕ್ವಿಂಟಾಲ್ ಕಳಪೆ ಬಿತ್ತನೆ ಬೀಜ (ಅನುಬಂಧ-2 ರಲ್ಲಿ ಒದಗಿಸಲಾಗಿದೆ) ಮತ್ತು ಕಳಪೆ/ನಕಲಿ ರಸಗೊಬ್ಬರ ಮಾರಾಟ ಸಂಬಂಧ 13 ಪ್ರಕರಣಗಳಲ್ಲಿ 63.55 ಮೆ.ಟನ್ ವಿವಿಧ ಗ್ರೇಡ್ ಕಳಪೆ/ ನಕಲಿ ರಸಗೊಬ್ಬರವನ್ನು (ಅನುಬಂಧ-3 ರಲ್ಲಿ ಒದಗಿಸಲಾಗಿದೆ) ವಶಪಡಿಸಿಕೊಳ್ಳಲಾಗಿದ್ದು, ತಪ್ಪಿತಸ್ಥರ ವಿರುದ್ಧ ಆ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ಎಫ್.ಐ.ಆರ್. ದಾಖಲಿಸಿದ್ದು, ತನಿಖೆ ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: AGRI/270/ACT/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

## ಅನುಬಂಧ-1

**ಯೂರಿಯಾ ರಸಗೊಬ್ಬರಗಳ ಅಕ್ರಮ ಸಾಗಾಣಿಕೆ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಬಳಕೆ ಸಂಬಂಧ ದಾಖಲಿಸಲಾದ ಪ್ರಕರಣಗಳ ವಿವರ**

| ಕ್ರ.ಸಂ | ವರ್ಷ | ಜಿಲ್ಲೆ | ಜಪ್ತು ಮಾಡಲಾ ಯೂರಿಯಾ ರಸಗೊಬ್ಬರದ ಪ್ರಮಾಣ (ಮೆ.ಟ) | ಮೊತ್ತ (ರೂ ಗಳಲ್ಲಿ) | ಕೈಗೊಳ್ಳಲಾದ ಕ್ರಮ |
|---|---|---|---|---|---|
| 1 | 2022-23 | ಬೆಳಗಾವಿ | 0.27 | 1596 | FIR No 145/2022 |
| 2 | | ಮೈಸೂರು | 6.08 | 35940 | FIR No 0005/2023 |
| 3 | | | 22.50 | 133000 | FIR No 090/2022 |
| 4 | | | 10.35 | 61180 | FIR No 233/2022 |
| 5 | | | 13.28 | 78500 | FIR No 0337/2022 |
| 6 | | ಕೊಡಗು | 13.50 | 79800 | FIR No 019/2022 |
| 7 | | | 20.00 | 118222 | FIR 097/2022 |
| 8 | | ಮಂಡ್ಯ | 10.26 | 60648 | FIR No 111/2022 |
| 9 | | ಚಾಮರಾಜನಗರ | 22.50 | 133000 | FIR No 0273/2022 |
| 10 | | ಶಿವಮೊಗ್ಗ | 29.66 | 175324 | FIR No 0555/2022 |
| 11 | 2023-24 | ಚಿಕ್ಕಮಗಳೂರು | 49.50 | 292600 | FIR No 0075/2023 |
| 12 | | | 15.16 | 89612 | FIR No 0089/2024 |
| 13 | | ದಾವಣಗೆರೆ | 16.65 | 98420 | FIR No 0131/2023 |
| 14 | | ತುಮಕೂರು | 35.10 | 207480 | FIR No 0099/2023 |
| 15 | | | 27.25 | 161078 | FIR No 0031/24 |
| 16 | | | 31.50 | 186200 | FIR No 0030/24 |
| 17 | 2024-25 | ತುಮಕೂರು | 25.20 | 148960 | FIR No 110/2024 |
| 18 | | ಚಿಕ್ಕಬಳ್ಳಾಪುರ | 31.50 | 186200 | FIR No 0349/2024 |
| 19 | | ಚಿತ್ರದುರ್ಗ | 29.70 | 175560 | FIR 0015/2025 |
| 20 | | ಉತ್ತರ ಕನ್ನಡ | 20.30 | 119996 | FIR 115/2024 |
| 21 | | ಕೋಲಾರ | 32.40 | 191520 | FIR 0086/2025 |
| ಒಟ್ಟು | | | **462.66** | **2734834** | |
| 1 | 2025-26(till 18.08.2025) | ಹಾಸನ | 12.60 | 74480 | FIR 44/2025 |
| 2 | | ತುಮಕೂರು | 27.00 | 159600 | FIR 0162/2025 |
| 3 | | ತುಮಕೂರು | 19.98 | 118104 | FIR 0129/2025 |
| 4 | | ಮೈಸೂರು | 15.00 | 88667 | FIR 0169/2025 |
| 5 | | ಹಾಸನ | 4.50 | 26600 | FIR 126/2025 |
| 6 | | ಚಿಕ್ಕಮಗಳೂರು | 13.45 | 79504 | FIR 0073/2025 |
| ಒಟ್ಟು | | | **92.53** | **546955** | |

# ಅನುಬಂಧ-2

## ಕಳೆದ ಮೂರು ವರ್ಷಗಳಲ್ಲಿ ಕಳಪೆ ಬಿತ್ತನೆ ಬೀಜ ಸಂಬಂಧ ದಾಳಿ ನಡೆಸಿ ವಶಕ್ಕೆ ಪಡೆಯಲಾದ ಪ್ರಕರಣಗಳ ವಿವರಗಳು

| ಕ್ರ.ಸಂ | ವರ್ಷ | ಜಿಲ್ಲೆ | ದಾಳಿ ಮಾಡಿರುವ ಗೋದಾಮು/ಉತ್ಪಾದನಾ ಘಟಕಗಳು ಹಾಗೂ ಮಾರಾಟ ಮಳಿಗೆಗಳ ಹೆಸರು | ದಾಸ್ತಾನು ಮುಟ್ಟುಗೋಲು ಹಾಕಿಕೊಂಡಿರುವ ಕೃಷಿ ಪರಿಕರಗಳ ವಿವರ | | | ಮೊಕದ್ದಮೆ ಹೂಡಿರುವ ವಿವರ |
|---|---|---|---|---|---|---|---|
| | | | | ಪರಿಕರಗಳ ಹೆಸರು | ಪ್ರಮಾಣ (ಕ್ವಿಂಟಲ್‌ಗಳಲ್ಲಿ) | ಮೊತ್ತ ಲಕ್ಷ (ರೂ ಗಳಲ್ಲಿ) | |
| 1 | 2022–23 | ಹಾವೇರಿ | ಕಿರಣ್ ಮಲ್ಲಿಕಾರ್ಜುನ ಅಂಗಡಿ, ಅಶೋಕನಗರ, ರಾಣೆಬೆನ್ನೂರು ಇವರ ಮನೆ ಹಾಗೂ ವಾಹನ | ರಾಸಾಯನಿಕದಿಂದ ಉಪಚರಿಸಿದ ಖುಲ್ಲಾ ಗೋವಿನ ಜೋಳದ ಬೀಜ | 18.50 | 1.85 | ಎಫ್.ಐ.ಆರ್. ನಂ.47/2022 |
| 2 | 2023-24 | ವಿಜಯನಗರ | ಕೂಡ್ಲಿಗಿ ಕೊಟ್ಟೂರು ಬೈಪಾಸ್ ರಸ್ತೆಯಲ್ಲಿ ಒಂದು ವಾಹನದಲ್ಲಿ ಅನುಮಾನಸ್ಪದವಾಗಿ ನಕಲಿ ಮೆಕ್ಕೆಜೋಳ ಬಿಜಗಳನ್ನು (Loos Seeds) ಸಾಗುಸುತ್ತಿರುವಾಗ ಜಪ್ತು ಮಾಡಲಾಯಿತು. | ಮೆಕ್ಕೆಜೋಳ ಬಿಜಗಳು (Lose Seeds) | 10.00 | 1.20 | ಎಫ್.ಐ.ಆರ್. ನಂ.: 0108/2023 |
| 3 | 2024-25 | ಹಾವೇರಿ | ಶ್ರೀ ಮಾತಾ ಸೀಡ್ಸ್ ಕಂಪನಿ, ರಾಣೆಬೆನ್ನೂರು | ಮೆಕ್ಕೆಜೋಳ ಬಿಜಗಳು (Lose Seeds) | 17.20 | 2.58 | PCR No. 73/2025 |
| 4 | 2024-25 | ಹಾವೇರಿ | ಶ್ರೀ ಕೃಷ್ಣಪ್ಪ ರಾಮಪ್ಪ ಒಡೆಯರಹಳ್ಳಿ, ಸಾ: ಅಂತರವಳ್ಳಿ, | ಮೆಕ್ಕೆಜೋಳ ಬಿಜಗಳು (Lose Seeds) | 27.00 | 4.05 | PCR No. 372/2024 |
| 5 | 2025-26 | ಹಾವೇರಿ | ಶಿವಂ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | - | - | ಎಫ್ ಐ.ಆರ್. ನಂ.0148/2025 |
| 6 | 2025-26 | ಹಾವೇರಿ | ಶ್ರೀ ಮರುಳಸಿದ್ದೇಶ್ವರ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | - | - | ಎಫ್ ಐ.ಆರ್. ನಂ. 0148/2025 |
| 7 | 2025-26 | ಹಾವೇರಿ | ನಿಸರ್ಗ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | - | - | ಎಫ್.ಐ.ಆರ್. ನಂ. 0148/2025 |
| 8 | 2025-26 | ಹಾವೇರಿ | ನಿಸರ್ಗ ಸೀಡ್ಸ್ ಪ್ರೈ. ಲಿಮಿಟೆಡ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | - | - | ಎಫ್.ಐ.ಆರ್. ನಂ 0148/2025 |
| 9 | 2025-26 | ಹಾವೇರಿ | ಸೂರ್ಯೋದಯ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | 6.03 | 2.98 | ಎಫ್.ಐ.ಆರ್. ನಂ. 0148/2025 |
| 10 | 2025-26 | ಹಾವೇರಿ | ಪ್ರಕಾಶ ಹೈಬ್ರೀಡ್ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | 10.00 | 4.00 | ಎಫ್.ಐ.ಆರ್. ನಂ. 0148/2025 |
| 11 | 2025-26 | ಹಾವೇರಿ | ಶ್ರೀ ನಂದಿ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | 5.11 | 1.61 | ಎಫ್.ಐ.ಆರ್. ನಂ. 0148/2025 |
| 12 | 2025-26 | ಹಾವೇರಿ | ಕೆ.ಬಿ.ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | 6.68 | 3.80 | ಎಫ್.ಐ.ಆರ್. ನಂ. 0148/2025 |
| 13 | 2025-26 | ಹಾವೇರಿ | ಶ್ರೀ ಮಣಿಕಂಟ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | 0.04 | 0.02 | ಎಫ್.ಐ ಆರ್. ನಂ. 0148/2025 |
| 14 | 2025-25 | ಹಾವೇರಿ | ಶ್ರೀ ಗುರು ಹೈಬ್ರೀಡ್ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | 4.28 | 2.50 | ಎಫ್.ಐ ಆರ್. ನಂ. 0143/2025 |
| 15 | 2025-26 | ಹಾವೇರಿ | ಶ್ರೀ ಗುರು ಶಾಂತೇಶ್ವರ ಆಗ್ರೋ ಸೆಂಟರ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | 0.57 | 0.34 | ಎಫ್.ಐ.ಆರ್. ನಂ. 0148/2025 |
| 16 | 2025-26 | ಹಾವೇರಿ | ಮಂಗಳಾ ಸೀಡ್ಸ್, ರಾಣೆಬೆನ್ನೂರು | ಗೋವಿನಜೋಳ ಬಿತ್ತನೆ ಬೀಜ | - | | ಎಫ್ ಐ.ಆರ್. ನಂ. 0148/2026 |
| | | | ಒಟ್ಟು | | 105.41 | 24.92 | |

## ಅನುಬಂಧ-3

### 2025–26ನೇ ಸಾಲಿನಲ್ಲಿ ಕಳಪೆ ರಸಗೊಬ್ಬರ ಮಾರಾಟ ಸಂಬಂಧ ದಾಳಿ ನಡೆಸಿ ವಶಕ್ಕೆ ಪಡೆಯಲಾದ ಪ್ರಕರಣಗಳ ವಿವರಗಳು

| ಕ್ರ ಸಂ | ವರ್ಷ | ಜಿಲ್ಲೆ | ದಾಳಿ ಮಾಡಿರುವ ಗೋದಾಮು/ಉತ್ಪಾದನಾ ಘಟಕಗಳು ಹಾಗೂ ಮಾರಾಟ ಮಳಿಗೆಗಳ ಹೆಸರು | ದಾಸ್ತಾನು ಮುಟ್ಟುಗೋಲು ಹಾಕಿಕೊಂಡಿರುವ ಕೃಷಿ ಪರಿಕರಗಳ ವಿವರ | | | ಮೊಕದ್ದಮೆ ಹೂಡಿರುವ ವಿವರ |
|---|---|---|---|---|---|---|---|
| | | | | ಪರಿಕರಗಳ ಹೆಸರು | ಪ್ರಮಾಣ (ಕ್ವಿಂಟಲ್‌ಗಳಲ್ಲಿ) | ಮೊತ್ತ ಲಕ್ಷ (ರೂ ಗಳಲ್ಲಿ) | |
| 1 | 2022-23 | ಗದಗ | ಲಾರಿಯಲ್ಲಿರುವ ನಕಲಿ ಗೊಬ್ಬರ, ಸವಡಿ | ನಕಲಿ ಡಿ.ಎ.ಪಿ. | 237.50 | 6.46 | ಎಫ್.ಐ.ಆರ್ ನಂ. 167/2022 |
| 2 | 2022-23 | ವಿಜಯನಗರ | ನಾಗರಾಜ ತಂ. ಹನುಮಂತಪ್ಪ ಇವರ ಮನೆ, ಚಿರಿಬಿ ಗ್ರಾಮ | ನಕಲಿ ಡಿ.ಎ.ಪಿ. | 57.00 | 3.42 | ಎಫ್.ಐ.ಆರ್. ನಂ.93/2022 |
| 3 | 2022-23 | ವಿಜಯನಗರ | ಮಲಿಯಪ್ಪ ತಂ.ಚೌಡಪ್ಪ ಇವರ ಮನೆ, ಗಂಗಮ್ಮನಹಳ್ಳಿ ಗ್ರಾಮ | ನಕಲಿ ಡಿ.ಎ.ಪಿ. | 15.00 | 0.69 | ಎಫ್.ಐ.ಆರ್. ನಂ.94/2022 |
| 4 | 2022-23 | ವಿಜಯನಗರ | ಹಾಸಿನಿ ಆಗ್ರೋ ಟ್ರೇಡರ್ಸ, ನಂದಿಹಳ್ಳಿ | ನಕಲಿ ಡಿ.ಎ.ಪಿ. | 0.40 | 0.01 | ಎಫ್.ಐ.ಆರ್. ನಂ.111/2022 |
| 5 | 2022-23 | ಬೀದರ್ | ವಾಹನದಲ್ಲಿ ಹಳ್ಳಿಗಳಿಗೆ ಮಾರಾಟ | ನಕಲಿ ಡಿ.ಎ.ಪಿ. | 6.50 | 0.12 | ಎಫ್.ಐ.ಆರ್. ನಂ 3352/2023 |
| 6 | 2022-23 | ಯಾದಗಿರಿ | ಚನ್ನಪ್ಪ ಬಿನ್ ಅಯ್ಯಣ್ಣ | ನಕಲಿ ರಸಗಿಬ್ಬರ | 106.60 | 5.14 | ಎಫ್.ಐ.ಆರ್. ನಂ.117/2022 |
| 7 | 2022-23 | ಯಾದಗಿರಿ | ಕೆ.ಬಿ.ಎನ್. ಆಗ್ರೋ ಏಜನ್ಸಿ, ಕೋಣಿಕೊಪ್ಪ | ನಕಲಿ ಡಿ.ಎ.ಪಿ. | 65.00 | 5.01 | ಎಫ್.ಐ.ಆರ್. ನಂ.63/2022 |
| 8 | 2025-26 | ಬಾಗಲಕೋಟೆ | ಟಾಟಾ ಕಾರ್ ಪಂಚ್ ನಲ್ಲಿ 12 ಚೀಲ | ನಕಲಿ ಡಿ.ಎ.ಪಿ. | 5.00 | 0.14 | ಎಫ್.ಐ.ಆರ್. ನಂ.:92/2025 |
| 9 | 2025-26 | ಬಾಗಲಕೋಟೆ | ದಕ್ಷಿಣ ಕಾಶಿ FPO ನಂದಿಕೇಶ್ವರ | ನಕಲಿ ಡಿ.ಎ.ಪಿ. | 66.00 | 1.78 | ಎಫ್.ಐ.ಆರ್. ನಂ.:125/2025 |
| 10 | 2025-26 | ಹಾವೇರಿ | ಶ್ರೀ ಉಳವಿ ಚನ್ನಬಸವೇಶ್ವರ ಟ್ರೇಡಿಂಗ ಕಂಪನಿ, ಮಾಸನಕಟ್ಟಿ | ಕಳಪೆ ಡಿ.ಎ.ಪಿ. ರಸಗೊಬ್ಬರ ವಿತರಣೆ | - | - | ಎಫ್.ಐ.ಆರ್ ನಂ 0114/2025 |
| 11 | 2025-26 | ಹಾವೇರಿ | ಹೊನ್ನಮ್ಮದೇವಿ ಟ್ರೇಡಿಂಗ್, ಮಾಸನಕಟ್ಟಿ | ಕಳಪೆ ಡಿ.ಎ.ಪಿ. ರಸಗೊಬ್ಬರ ವಿತರಣೆ | - | - | ಎಫ್.ಐ.ಆರ್. ನಂ 0114/2025 |
| 12 | 2025-26 | ಹಾವೇರಿ | ಸ್ವಸ್ತಿಕ ಅಗ್ರೋ ಸೆಂಟರ್, ರಾಣೆಬೆನ್ನೂರು | ಕಳಪೆ 17:17:17 ಕಾಂಪ್ಲೆಕ್ಸ್ ರಸಗೊಬ್ಬರ | 35.00 | 0.63 | ಮೊಕದ್ದಮೆ ಹೂಡಲಾಗಿದೆ( CC No Awaited). |
| 13 | 2025-26 | ಹಾವೇರಿ | ಶ್ರೀ ಬನಶಂಕರಿ ಅಗ್ರೋ ಟ್ರೇಡರ್ಸ್, ರಾಣೆಬೆನ್ನೂರು | ಕಳಪೆ 17:17:17 ಕಾಂಪ್ಲೆಕ್ಸ್ ರಸಗೊಬ್ಬರ | 41.50 | 0.75 | ಮೊಕದ್ದಮೆ ಹೂಡಲಾಗಿದೆ( CC No Awaited) |
| ಒಟ್ಟು | | | | | 635.50 | 3.29 | |